# ಕತ್ರೀನಾ–ವಿಕ್ಕಿ ಪರಿಣಯ ವರ್ತಮಾನವು...

■ ವಿಶಾಖ ಎನ್‌.



ಸಲ್ಮಾನ್ ಖಾನ್ ಅವರೊಟ್ಟಿಗೆ 'ಟೈಗರ್ 3' ಚಿತ್ರದಲ್ಲಿ ನಟಿಸುತ್ತಾರೆನ್ನುವ, ಶ್ರೀರಾಮ್ ರಾಘವನ್ ನಿರ್ದೇಶನದ ಹಿಂದಿ ಚಿತ್ರದಲ್ಲಿ ವಿಜಯ್ ಸೇತುಪತಿ ಜತೆಗೆ ಅಭಿನಯಿಸುತ್ತಾರೆನ್ನುವ ಸುದ್ದಿಗಳಿಂದಾಗಿ ಕತ್ರೀನಾ ಕೈಫ್ ಕೆಲವು ವಾರಗಳಿಂದ ಸುದ್ದಿ ಮಾಡಿದ್ದರು. ಆದರೀಗ ಅವರು ವಿಕ್ಕಿ ಕೌಶಲ್ ಅವರನ್ನು ಮದುವೆಯಾಗಲಿದ್ದಾರೆ, ಡಿಸೆಂಬರ್ ಮೊದಲ ವಾರವೇ 'ಡುಂಡುಂ ಡೋಲ್ ಅಂತೆ' ಎಂಬೆಲ್ಲ ಗಾಳಿಮಾತಿನಿಂದಾಗಿ ಚಾಲ್ತಿಯಲ್ಲಿದ್ದಾರೆ.

ವಿಕ್ಕಿ ಆಗಲಿ, ಕತ್ರೀನಾ ಆಗಲಿ ತಮ್ಮ ಮದುವೆ ಸುದ್ದಿಯನ್ನು ಸ್ಪಷ್ಟಪಡಿಸಿಲ್ಲ. ಆಗುವುದಿಲ್ಲವೆಂದೂ ಪ್ರತಿಕ್ರಿಯಿಸಿಲ್ಲ. ಹೀಗಾಗಿ ಮೌನಂ ಸಮ್ಮತಿ ಲಕ್ಷಣಂ ಎಂದೇ ಬಹುಮಾಧ್ಯಮಗಳು ನಂಬಿವೆ.

ಮದುವೆ ಎಲ್ಲಿ ನಡೆಯುತ್ತದೆ, ವಧು–ವರರ ವಾರ್ಡ್‌ರೋಬ್‌ನಲ್ಲಿ ಏನೆಲ್ಲ ದಿರಿಸುಗಳನ್ನು ಅಣಿಗೊಳಿಸಲಾಗುತ್ತಿದೆ, ಮಂಟಪ ಹೇಗಿರುತ್ತದೆ, ಏನೆಲ್ಲ ಆಚರಣೆಗಳು ನಡೆಯಲಿವೆ ಎಂದೆಲ್ಲ ಊಹಾಪೋಹಗಳು ನಡೆಯುತ್ತಿವೆ. ಅಷ್ಟೇ ಅಲ್ಲ, ಐಷಾರಾಮಿ ಫ್ಲ್ಯಾಟ್ ಒಂದನ್ನು ಇಬ್ಬರೂ ತಮಗಾಗಿ ಬಾಡಿಗೆಗೆ ಪಡೆದುಕೊಂಡಿದ್ದಾರೆ ಎಂಬ ಸುದ್ದಿಯೂ ಪ್ರಕಟವಾಗಿದೆ.

ಸಲ್ಮಾನ್ ಖಾನ್ ಹಾಗೂ ಕತ್ರೀನಾಗೆ ಸಂಬಂಧವಿತ್ತು ಎಂದು 2003ರಲ್ಲಿ ವದಂತಿ ಹಬ್ಬಿತ್ತು. ಆಗಲೂ ಅವರು ಮೌನವಾಗಿದ್ದರು. 'ಬದುಕಿನಲ್ಲಿ ವಿವಾಹಪೂರ್ವ, ವಿವಾಹಾನಂತರ ಎಂಬ ಎರಡು ಹಂತಗಳಿವೆ. ಮೊದಲ ಹಂತದಲ್ಲೂ ಘನತೆಯಿಂದ ಬದುಕಲು ನಾನು ಬಯಸುತ್ತೇನೆ' ಎಂದು ಕತ್ರೀನಾ ಆಗ ಹೇಳಿದ್ದ ಮಾತನ್ನು ಸಿನಿಮಾ ಮಂದಿ ಕೂಡ ಹೊಗಳಿದ್ದರು. 2010ರಲ್ಲಿ ಸಲ್ಮಾನ್ ಅವರಿಂದ ಸಂಬಂಧದ ಕೊಂಡಿ ಕಳಚಿಕೊಂಡ ಮೇಲಷ್ಟೆ ಅವರು, 'ನನ್ನ ಬದುಕಿನ ಮೊದಲ ಸಂಬಂಧ ಅದಾಗಿತ್ತು' ಎಂದು ಪ್ರತಿಕ್ರಿಯಿಸಿದ್ದು. ಹಾಗೆ ಸಂಬಂಧ ಕಡಿದುಕೊಂಡ ಮೇಲೂ ಅವರಿಬ್ಬರ ನಡುವಿನ ಸ್ನೇಹ ಚೆನ್ನಾಗಿದೆ. ಸಲ್ಮಾನ್ ಖಾನ್ ತಮ್ಮ ವೃತ್ತಿ ಬದುಕಿನ ಮಾರ್ಗದರ್ಶಕ ಎಂದೇ ಕತ್ರೀನಾ ಈಗಲೂ ಹೇಳುತ್ತಾರೆ.

ವಿಕ್ಕಿ ಕೌಶಲ್ ಜತೆಗೆ ಪ್ರೇಮಾಂಕುರ ಯಾವಾಗ ಆಯಿತೆನ್ನುವುದು ಅಭಿಮಾನಿಗಳ ಕುತೂಹಲ. 38ರ ಹರೆಯದ ನಟಿ ತಮಗಿಂತ ನಾಲ್ಕು ವರ್ಷ ಚಿಕ್ಕಪ್ರಾಯದ ಯುವನಟನಿಗೆ ಮನಸೋತದ್ದು ಹೇಗೆ ಎನ್ನುತ್ತಾ ಪ್ರಶ್ನಾರ್ಥಕ ನೋಟ ಬೀರುತ್ತಿರುವವರ ಸಂಖ್ಯೆ ದೊಡ್ಡದಿದೆ. ■

# ಅಟ್ಲೆ ಚಿತ್ರಕ್ಕೆ ಮರಳಿದ ಶಾರುಖ್



ಅರುಣ್ ಕುಮಾರ್ ಎಂಬ ಹೆಸರಿನವರಾದ, ಅಟ್ಲಿ ಎಂದೇ ಜನಪ್ರಿಯರಾದ ತಮಿಳು ನಿರ್ದೇಶಕ ಈಗ ನೆಮ್ಮದಿಯ ನಿಟ್ಟುಸಿರಿಟ್ಟಿದ್ದಾರೆ. ಇನ್ನೂ ಹೆಸರಿಡದ ಅವರ ಮೊದಲ ಹಿಂದಿ ಚಿತ್ರದಲ್ಲಿ ಶಾರುಖ್ ಖಾನ್ ನಟಿಸಲು ಒಪ್ಪಿದ್ದದ್ದು ಹಳೆಯ ಸುದ್ದಿ. ಪುತ್ರನ ಡ್ರಗ್ಸ್ ಪ್ರಕರಣದಿಂದಾಗಿ ಚಿತ್ರೀಕರಣಗಳಿಂದ ಅಲ್ಪವಿರಾಮ ಪಡೆದಿದ್ದ ಶಾರುಖ್, ಈ ಚಿತ್ರಕ್ಕೆ ಏನೆನ್ನುವರೋ ಎಂಬ ಪ್ರಶ್ನೆ ಅಟ್ಲಿ ಅವರಲ್ಲಿ ಇತ್ತು. ಕೆಲಸಕ್ಕೆ ಮರಳುವುದಾಗಿ ಶಾರುಖ್ ಹೇಳಿದ್ದರಿಂದ ಅಟ್ಲಿ ಈಗ ನಿರಾಳರಾಗಿದ್ದಾರೆ.



ನಯನತಾರಾ ನಾಯಕಿಯಾಗಿ ಈ ಚಿತ್ರಕ್ಕೆ ಆಯ್ಕೆಯಾಗಿದ್ದರು. ಶಾರುಖ್ ಖಾನ್ ಡೇಟ್ಸ್ ಮರುಹೊಂದಾಣಿಕೆ ಮಾಡಬೇಕಾಗಿ ಬಂದದ್ದರಿಂದ ಅವರ ಕೆಲಸಗಳಲ್ಲೂ ಏರುಪೇರಾಯಿತು. ಸಿನಿಮಾ ಚಿತ್ರೀಕರಣ ಮುಂದಕ್ಕೆ ಹೋಗುತ್ತಲೇ ಇದ್ದರೆ ಬೇರೆ ಚಿತ್ರಗಳ ಕೆಲಸಕ್ಕೆ ಅಡ್ಡಿಯಾಗುತ್ತದೆ ಎಂದು ನಯನತಾರಾ ಅಟ್ಲಿ ಚಿತ್ರದಿಂದ ಹೊರನಡೆಯುವುದಾಗಿ ನಿರ್ಧರಿಸಿದ್ದರು. ಈಗ ಶಾರುಖ್ ಚಿತ್ರೀಕರಣಕ್ಕೆ ಮರಳುತ್ತಿರುವುದರಿಂದ ಆ ಸಮಸ್ಯೆ ಬಗೆಹರಿದಂತಾಗಿದೆ. ನಯನತಾರಾ ಮತ್ತೆ ಹಿಂದಿ ಚಿತ್ರದಲ್ಲಿ ಅಭಿನಯಿಸುವುದು ಸ್ಪಷ್ಟವಾಗಿದೆ.

'ಪಠಾಣ್' ಎಂಬ ಥ್ರಿಲ್ಲರ್ ಹಾಗೂ ರಣಬೀರ್ ಕಪೂರ್–ಆಲಿಯಾ ಜೋಡಿಯಾ 'ಬ್ರಹ್ಮಾಸ್ತ್ರ' ಚಿತ್ರಗಳಲ್ಲೂ ಶಾರುಖ್ ಅಭಿನಯವಿದೆ. ಅವುಗಳ ಚಿತ್ರೀಕರಣದಲ್ಲೂ ಕೊಂಚ ಏರುಪೇರಾಗಿತ್ತು. ತಮ್ಮ ಪುತ್ರನಿಗೆ ಜಾಮೀನು ಸಿಕ್ಕಮೇಲೆ ಶಾರುಖ್, ಒಪ್ಪಿಕೊಂಡ ಯೋಜನೆಗಳಲ್ಲಿ ಮತ್ತೆ ತೊಡಗಲಾರಂಭಿಸಿದ್ದಾರೆ. 'ತೇರಿ', 'ಮರ್ಸೆಲ್', 'ಬಿಗಿಲ್' ತರಹದ ಹಿಟ್ ಚಿತ್ರಗಳನ್ನು ತಮಿಳಿನಲ್ಲಿ ವಿಜಯ್‌ಗೆ ನೀಡಿರುವ ಅಟ್ಲಿ ಈ ಕಾಲದ ಪ್ರೇಕ್ಷಕರನ್ನು ಹಿಡಿದಿಡುವಂಥ ಕಮರ್ಷಿಯಲ್ ಚಿತ್ರಗಳನ್ನು ಮಾಡುತ್ತಾರೆ ಎಂದು ಶಾರುಖ್ ಈ ಹಿಂದೆ ಹೊಗಳಿದ್ದರು. ■




॥ ಶ್ರೀ ಗುರು ಓಂ ಶ್ರೀ ಸಾಯಿರಾಂ ॥

Indian Famous Astrologer

ಬಿಳಿಗಿರಿ ರಂಗನ ಬೆಟ್ಟದಿಂದ ನೇರ ಪರಿಹಾರ



ಓಂ ಶ್ರೀ ಸಾಯಿ ಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು

ಕೇರಳದ ಮಹಾಜ್ಞಾನಿ ದೈವಜ್ಞ
ಪಂ॥ ಬಿ. ಗುರುಪ್ರಸಾದ್
ಮಾತಾ ಕಾಳಿಕಾದೇವಿ ಆರಾಧಕರು

ಕೇರಳದ ಅಷ್ಟಮಂಗಲ ಪ್ರಶ್ನೆ, ಆರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಸಮಸ್ಯೆಗಳಾದ ವಿದ್ಯೆ, ಮದುವೆ, ವಿದೇಶ ಪ್ರಯಣ, ಆರೋಗ್ಯ, ಸಂತಾನ, ಮಾಟ–ಮಂತ್ರ, ಶತ್ರುನಾಶ, ಸ್ತ್ರೀ–ಪುರುಷ ವಶೀಕರಣ, ಕೋರ್ಟ್ ಕೇಸ್ ವ್ಯಾಪಾರದಲ್ಲಿ ತೊಂದರೆ ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕೆರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿ ಚಾತನ್ ತಪೋ ಶಕ್ತಿಯಿಂದ 3 ದಿನಗಳಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ.

Get your Any Problem 100% Solutions wit in 3 Days

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.

ವಿ.ಸೂ: ನಮ್ಮನ್ನು ಬಿಟ್ಟು ಬೇರೆ ಯಾರಾದರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

ಬೆಂಗಳೂರಿನಲ್ಲಿ ಲಭ್ಯವಿರುತ್ತಾರೆ

ನಿಮ್ಮ ಯಾವುದೇ ಸಮಸ್ಯೆ ಇದ್ದರು ಗುಪ್ತವಾಗಿ ಇಡಲಾಗುವುದು.

9972851544